*ಈ ಯೋಜನೆಯು ಇಂಡಿಯಾ ಫೌಂಡೇಷನ್ ಆಫ್ ಆರ್ಟ್ಸ್‌ನವರ ಸಹಕಾರದಿಂದ 560 ಕಾರ್ಯಕ್ರಮದ ಅಡಿ ಸಾಧ್ಯವಾಗಿದೆ.*

# ಬೆವರು

ಜುಲೈ 2019
ಬೆಂಗಳೂರು
Rs.5/- only

*ಪ್ರೀತಿ, ಘನತೆ, ಹೋರಾಟ*

**ಒಕ್ಕೂಟಗಳು ಮತ್ತು ಗೃಹ ಕಾರ್ಮಿಕರ ಸಂಘಗಳು, ಲೈಂಗಿಕ ಕಾರ್ಯಕರ್ತರು, ಪೌರಕಾರ್ಮಿಕರು ಮತ್ತು ಗಾರ್ಮೆಂಟ್ ಕಾರ್ಮಿಕರ ಸಹಯೋಗದೊಂದಿಗೆ.**

## ಸರ್ಕಾರ ಕಾರ್ಮಿಕರಿಗಾಗಿಯೇ?

2019ರ ಚುನಾವಣೆ ಮುಗಿದು, ಫಲಿತಾಂಶ ನಮ್ಮ ಮುಂದಿದೆ. ದೀರ್ಘಕಾಲದ ನಂತರ ಒಬ್ಬ ರಾಜಕಾರಣಿಗೆ, ಒಂದು ಪಕ್ಷಕ್ಕೆ ಇಷ್ಟು ದೊಡ್ಡ ಗೆಲುವು ದೊರಕಿದೆ. ಹಲವಾರು ಮೈತ್ರಿ ಸರ್ಕಾರ ರಚನೆಯಾದ ನಂತರ, ಭಾರತದ ಜನತೆಯ ಮತ ಚಲಾವಣೆಯಲ್ಲಿ ಏನೋ ಬಹಳಷ್ಟು ಬದಲಾವಣೆ ಆಗಿದೆ. ಇದಕ್ಕೆ ಏನು ಕಾರಣ?

ಒಂದು ಬಹುಮುಖ್ಯವಾದ ಕಾರಣವೇನೆಂದರೆ, ಈ ಸರ್ಕಾರವು ಸಾಮಾನ್ಯ ಜನರಿಗೆ ತೊಂದರೆಗಳನ್ನು ಹೆಚ್ಚಿಸಿತ್ತು ಆದರೆ ಚುನಾವಣೆಯ ಗೆಲುವಿಗಾಗಿ ಕೆಲವೇ ನಿರ್ದಿಷ್ಟ ಸಮುದಾಯಗಳಿಗೆ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿತ್ತು. ಉಜ್ವಲ, ಆಯುಷ್ಮಾನ್, ಆವಾಸ್‌ಯೋಜನಾ ಮುಂತಾದ ಯೋಜನೆಗಳಲ್ಲಿ, ಕೇಂದ್ರ ಸರ್ಕಾರದಿಂದ ನೇರವಾಗಿ ಜನರ ಬ್ಯಾಂಕ್ ಖಾತೆಗಳಿಗೆ ಹಣ ದೊರಕುತ್ತದೆ ಎಂಬುದು. ಈ ಹೊಸ ರಾಜಕಾರಣವು ಸಾಧ್ಯವಾಗಿದ್ದು ಹೇಗೆಂದರೆ, ಈಗ ಪ್ರತಿಯೊಬ್ಬರನ್ನೂ ಮತ್ತು ಪ್ರತಿ ಮನೆಯನ್ನೂ ಸಹ ಆಧಾರ್ ಮತ್ತು ಮೊಬೈಲ್ ಸಂಖ್ಯೆಗಳಿಂದ ಲಿಂಕ್ ಮಾಡಲಾಗಿದೆ ಮತ್ತು ಸರ್ಕಾರದ ಹತ್ತಿರ ಎಲ್ಲ ಮಾಹಿತಿಯೂ ಇದೆ. ಅಂದರೆ ಭವಿಷ್ಯದಲ್ಲಿ ಈ ರೀತಿ ಕೆಲವೇ ಜನರಿಗೆ ಹಣಕೊಟ್ಟು, ಮಿಕ್ಕ ಎಲ್ಲರೂ ವಿಧೇಯರಾಗಿರಬೇಕೆಂದು ಹೇಳಲಾಗುತ್ತದೆಯೇ?

1990 ರಲ್ಲಿ ಮಂಡಲ್ ವರದಿಯ ನಂತರ ಹಲವಾರು ಹಿಂದುಳಿದ ಸಮುದಾಯದ ರಾಜಕಾರಣಿಗಳು ಮುಂದೆ ಬರಲು ಸಾಧ್ಯವಾಯಿತು ಮತ್ತು ಅವರ ಸಮುದಾಯಕ್ಕೆ ಹಲವು ಪರಿಹಾರ ಮತ್ತು ಸೌಲಭ್ಯಗಳನ್ನು ಕೊಡಿಸಲು ಸಾಧ್ಯವಾಯಿತು. ಆದರೆ ಈ ಪರಿಸ್ಥಿತಿಯು ಈಗ ಹಿಮ್ಮುಖವಾಗಿ ಚಲಿಸಿದೆ, ಮತ್ತು ಕಳೆದ 15 ವರ್ಷಕ್ಕೆ ಹೋಲಿಸಿದರೆ ಪ್ರಸ್ತುತ ಲೋಕ ಸಭೆಯಲ್ಲಿ ಬಲಿಷ್ಠ ಜಾತಿಗಳು ಹೆಚ್ಚಿನ ಸ್ಥಾನ ಹೊಂದಿವೆ. ಭಾರತದಲ್ಲಿ ದಲಿತರು, ಹಿಂದುಳಿದ ವರ್ಗ ಮತ್ತು ಆದಿವಾಸಿಗಳು ಎಲ್ಲರೂ ಸೇರಿ ಬಹುಸಂಖ್ಯಾತರಾಗಿದ್ದರೂ ಸಹ ಕೆಲವೇ ಅಲ್ಪಸಂಖ್ಯಾತ ಬಲಿಷ್ಠ ಜಾತಿಗಳು ಕೇಂದ್ರ ಸರ್ಕಾರದಲ್ಲಿ ಆಯಕಟ್ಟಿನ ಹುದ್ದೆಗಳನ್ನು ಹೊಂದಲು ಯಶಸ್ವಿಯಾಗಿವೆ. ಹೀಗೆ ಸಣ್ಣ ಪ್ರಮಾಣದ ಬಲಿಷ್ಠ ಜಾತಿಗಳು ನಾಯಕ ಸ್ಥಾನದಲ್ಲಿ ನಿಂತು ಬಹುಜನ ಸಮಾಜವನ್ನು ಪ್ರತಿನಿಧಿಸುವುದು ಮುಂದಿನ ಭವಿಷ್ಯವಾಗುತ್ತದೆಯೇ?

ಕಳೆದ ಎರಡು ದಶಕಗಳಲ್ಲಿ ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳಲ್ಲಿ ಸುಸ್ಥಿರ ಉದ್ಯೋಗ ಪ್ರಮಾಣವು ಏರಿಕೆಯಾಗಿಲ್ಲ ಮತ್ತು ಹಲವೆಡೆ ಇಳಿಕೆಯಾಗಿವೆ. ಹಳೇ ವ್ಯವಸ್ಥೆಯ ಬದಲಾಗಿ ನಮಗೆ ಇಂದು ಅರೆಕಾಲಿಕ, ಗುತ್ತಿಗೆಯಾಧಾರದ ಉದ್ಯೋಗ ದೊರಕುತ್ತಿದೆ. ತಂತ್ರಜ್ಞಾನವು ಮುಖ್ಯ ಪಾತ್ರ ವಹಿಸುವ ಖಾಸಗೀ ಕ್ಷೇತ್ರದಲ್ಲಿ ಉಬರ್ (ಟ್ಯಾಕ್ಸಿ) ಮತ್ತು ಸ್ವಿಗ್ಗಿ (ಆಹಾರಒದಗಿಸುವುದು) ಯಂತ ಖಾಸಗೀ ಕಂಪನಿಗಳು ಜನರನ್ನು ನೇಮಿಸಿಕೊಳ್ಳುತ್ತದೆ, ಆದರೆ ಆ ಕಾರ್ಮಿಕರಿಗೆ ಯಾವುದೇ ಸಾಮಾಜಿಕ ಭದ್ರತೆಯಿಲ್ಲ ಮತ್ತು ತಮ್ಮ ವೇತನದ ಮೇಲೆ ಅವರಿಗೆ ಯಾವುದೇ ಹಿಡಿತವಿರುವುದಿಲ್ಲ. ಕೆಲಸದ ಸಾಮರ್ಥ್ಯ ಗ್ರಾಹಕರ ಬೇಡಿಕೆ ಮತ್ತು ವೇತನದ ನಡುವೆ ಸಂಬಂಧ ಕಲ್ಪಿಸುವ ಇನ್ಸೆಂಟಿವ್ ಎನ್ನುವ ಸಂಕೀರ್ಣ ವ್ಯವಸ್ಥೆಯ ಅನುಕಂಪದಲ್ಲಿ ಅವರು ಬದುಕಬೇಕಾಗಿದೆ. ತಂತ್ರಜ್ಞಾನ ಮತ್ತು ಸ್ಮಾರ್ಟ್‌ಫೋನ್‌ಗಳಿಂದ ಕೆಲಸದ ಸ್ವರೂಪವು ಬದಲಾಗಿದೆ, ಆದರ ಲಾಭ ಮತ್ತು ಮಾಲೀಕರ ಹಿಡಿತದ ವ್ಯವಸ್ಥೆಯು ಹಾಗೇ ಉಳಿದಿದೆ. ಅಂದರೆ ಹೀಗೆ ಕಾರ್ಮಿಕರು ಕಣ್ಣಿಗೆ ಕಾಣದ ಮಾಲೀಕರೊಂದಿಗೆ ತಮ್ಮ ಹಕ್ಕುಗಳನ್ನು ಕೇಳಲು ಆಗದೇ ಇರುವಂತಹ, ಫೋನ್ ಆಪ್‌ಗಳ ಕರುಣೆಯಲ್ಲಿ ಜೀವಿಸುವಂತಹ ಪರಿಸ್ಥಿತಿಯೇ ಮುಂದಿನ ಭವಿಷ್ಯವೇ?

ಇದೆಲ್ಲದರ ನಡುವೆಯೇ, ಕರ್ನಾಟಕದಲ್ಲಿ ಭವಿಷ್ಯ ನಿಧಿಯ ಸಮಸ್ಯೆ ಉಂಟಾದಾಗ, ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ಶಕ್ತಿ ಪ್ರದರ್ಶಿಸಿದರು. ಪರಿಣಾಮವಾಗಿ ಕೆಲವೇ ಗಂಟೆಗಳಲ್ಲಿ ಸರ್ಕಾರ, ಪಿ.ಎಫ್ ಕಾಯಿದೆ ಕುರಿತ ತಿದ್ದುಪಡಿಯನ್ನು ರದ್ದು ಮಾಡಬೇಕಾಯಿತು. ಆದರೆ ಬಿ.ಜೆ.ಪಿ. ಸರ್ಕಾರವು ಪುನ: ಬಂಡವಾಳದಾರರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾರ್ಮಿಕ ಕಾನೂನುಗಳನ್ನೇ ಬದಲಿಸಲು ಶಿಫಾರಸು ಮಾಡಿದೆ. ಇದರಿಂದ ಕಾರ್ಮಿಕರು ಒಟ್ಟಾಗಲು ಮತ್ತು ತಮ್ಮ ಹಕ್ಕುಗಳಿಗಾಗಿ ಆಗ್ರಹಿಸುವುದು ಇನ್ನೂ ಕಷ್ಟವಾಗಲಿದೆ. ಬೇರೆ ಬೇರೆ ವಲಯದ ಕಾರ್ಮಿಕರು ತಮ್ಮ ಹಕ್ಕುಗಳ ಆಗ್ರಹಕ್ಕಾಗಿ ಒಟ್ಟಾಗಿ ಬರಲು ಸಾಧ್ಯವೇ? ಜೀವನ ಸಾಗಿಸಲೇ ಕಷ್ಟಪಡಬೇಕಾದ ಈ ಸಂದರ್ಭದಲ್ಲಿ ಕಾರ್ಮಿಕರು ಹೇಗೆ ಒಟ್ಟಾಗಿ ಬರಲು ಎಲ್ಲಿ ಮತ್ತು ಹೇಗೆ ಸಾಧ್ಯ?

ಕೆಲವು ಪ್ರಶ್ನೆಗಳಿಗೆ ತಾತ್ಕಾಲಿಕವಾಗಿ ಉತ್ತರ ಸಿಗದಿದ್ದರೂ, ಪ್ರಶ್ನಿಸುವ ಹಕ್ಕು ನಮ್ಮದು, ಕರ್ತವ್ಯವು ನಮ್ಮದು.

ವಿವಿಧ ವಲಯದ ಕಾರ್ಮಿಕರ ದೃಷ್ಟಿಕೋನ ಮತ್ತು ಅನುಭವವನ್ನು ಪ್ರತಿನಿಧಿಸುವ ಒಂದು ಪ್ರಯತ್ನ 'ಬೆವರು'. ಈ ಎಲ್ಲರ ನಡುವೆ ಸಂವಾದ ಮತ್ತು ಪರ್ಯಾಲೋಚನೆಗಳಿಗೆ ಒಂದು ಅವಕಾಶ ಕಲ್ಪಿಸುವುದು, ಕಾರ್ಮಿಕರ ದೈನಂದಿನ ಬದುಕು, ಅವರ ಆಕಾಂಕ್ಷೆ, ಕನಸು ಮತ್ತು ಹೋರಾಟಗಳೇ ಈ ಪತ್ರಿಕೆಯ ಗುರಿ. ನಗರದ ಕಾರ್ಮಿಕರ ಜೀವನದೊಂದಿಗೆ ಹಾಸುಹೊಕ್ಕಾಗಿ ಬೇಕಾಗಿರುವ ಸಮಾನತೆಯ ಅಂಶದ ಮೇಲೆ ಬೆವರು ತನ್ನ ಗಮನ ಕೇಂದ್ರೀಕರಿಸುತ್ತದೆ.



## ಶ್ರಮಿಸುವ ನಿರ್ಮಲ ಕೈಗಳು

ಕೈಯಲ್ಲಿ ಕಸಪೊರಕೆ ಹಿಡಿದು ಜಿಡ್ಡು ಹಿಡಿದಿರುವ ನೆಲ, ತುಂಬಿ ಹೊರಚಲ್ಲುತ್ತಿರುವ ಕಸದ ಬುಟ್ಟಿಯಿದ್ದ ಮನೆಯನ್ನು ಹೊಕ್ಕುವಳು.

"ಲಾಕರಿನಲ್ಲಿದ್ದ ರೂ 15 ಲಕ್ಷ, ಕಳೆದ ವಾರವಷ್ಟೆ ನಾವು ಖರೀದಿಸಿದ್ದ ಬೆಳ್ಳಿ ಸಾಮಾನುಗಳನ್ನು ಕದ್ದಿರುವೆ.ರೂ 19000/ ಬೆಲೆಬಾಳುವಂತಹ ನನ್ನ ರೇಷ್ಮೆ ಸೀರೆಯನ್ನು ಕದ್ದಿರುವೆ".

"ಇಲ್ಲ. ನಾನೇನನ್ನು ಕದ್ದಿಲ್ಲ. ದಯವಿಟ್ಟು ನಂಬಿ ನನ್ನ". ದೈನ್ಯದಿಂದ ಯಾಚಿಸುತ್ತಾಳೆ. ಮತ್ತೆ ಮತ್ತೆ. 8 ವರ್ಷಗಳ ಕಾಲ ಅವರ ಮನೆಯಲ್ಲಿ ಕೆಲಸ ಮಾಡಿದ್ದರೂ ಸಹ ಅವರಿಗೆ ಅವಳ ಮೇಲೆ ನಂಬಿಕೆಯಿರದು. ಅವಳು ಅವರ ಮನೆಯ ಕೆಲಸಕ್ಕೆ ಸೇರಿ ಕೇವಲ ಒಂದೆ ಒಂದು ತಿಂಗಳಾಗಿರಬಹುದಾಗಿದ್ದರೂ ಸಹ ಅವಳಿಗೆ ಲಾಕರನ್ನು ಮುರಿಯಲು ಆ ಅವಧಿಯು ಸಾಕೆಂದು ನಂಬುವರು. ಅವರಿಗೆ ಅವಳ ದುರ್ಬಲ ಆರ್ಥಿಕ ಸ್ಥಿತಿಯೇ ಸಾಕು ಅವರ ಆರೋಪವನ್ನು ಸಮರ್ಥಿಸಿಕೊಳ್ಳಲು.

ಈಗಾಗಲೆ ಅವಳ ಮೇಲೆ ದೂರು ನೀಡಿರುವರು. ನಿರ್ದಯವಾಗಿ ಪೋಲಿಸರು ಅವಳನ್ನು ಠಾಣೆಗೆ ಎಳೆದ್ಯೊಯುವರು. ಅವಳಿಗೆ ಸಮರ್ಥಿಸಿಕೊಳ್ಳಲು ಯಾವ ಅವಕಾಶವೂ ನೀಡದೆ ಅವಳನ್ನು ಜೈಲಿನಲ್ಲಿ ಕೂಡಾಕಿ ಸದೆಬಡಿಯುತ್ತಾರೆ.

ಅಡುಗೆ ಕೋಣೆಯ ನೆಲದ ಮೇಲಿನ ಕೊಳೆಯನ್ನು ತೆಗೆಯುವಷ್ಟರಲ್ಲಿ ಅವಳ ಮಂಡಿಗಳು ವಿಪರೀತ ನೋವನ್ನು ಅನುಭವಿಸುತ್ತಿವೆ. ಪಾತ್ರೆಗಳ ಜಿಡ್ಡನ್ನು ತೊಳೆಯುವಷ್ಟರಲಿ ಅವಳ ಕೈಗಳು ಊದಿಕೊಂಡಿವೆ. ಬೆಳಗ್ಗೆ ಮಾಡಿದ ಚಹಾದ ವಾಸನೆಯು ಇನ್ನು ಕೋಣೆಯಲ್ಲಿ ಘಂ

’ಬೆವರು’ ಬೆಂಗಳೂರಿನಲ್ಲಿ ಇರುವಂತಹ ಕಾರ್ಮಿಕರ ದನಿ, ನೋಟ, ಮತ್ತು ಅವರ ಅನುಭವಕ್ಕೆ ಸಮರ್ಪಿತವಾಗಿದೆ.ಈ ಪತ್ರಿಕೆಯು ಅಸಂಘಟಿತ ವಲಯದ ಕಾರ್ಮಿಕರನ್ನ ಕೇಂದ್ರೀಕರಿಸಿದೆ. ಸುತ್ತಲಿರುವ ಕಾರ್ಮಿಕರನ್ನ ಕುರಿತಂತ ಬರಹ, ಹಾಡು, ಕವನ, ಚಿಂತನೆಗಳನ್ನ ದಯಮಾಡಿ ಹಂಚಿಕೊಳ್ಳಿ. ಹೆಚ್ಚಿನ ಮಾಹಿತಿಗಾಗಿ : bevarupaseena@gmail.com ಗೆ ಬರೆಯಿರಿ ಅಥವಾ ಕರೆಮಾಡಿ 6361957626.

**ಕನ್ನಡ ಅನುವಾದ:** ಚಿತ್ರ. ಎಸ ಐಯ್ಯೆರ್ ಕಲ್ಪನಾ ಚಕ್ರವರ್ತಿ, ಪ್ರತಿಭಾ. ರ್ , ಮಹಿಮ ಗೌಡ, ಬಸವಾಚಾರ್. ಸ

**ರೇಖಾಚಿತ್ರಗಳು:** ಕರೆನ್ ಹೆಡೊಕ್

**ವಿನ್ಯಾಸ:** ಜಯಸಿಂಹ ಸಿ

ಅನ್ನುತಿತ್ತು. ಅಕ್ಕ ಅವಳಿಗೂ ಕೊಡಬಹುದೆಂಬ ನಿರೀಕ್ಷೆಯಿಂದ ಗಡಿಯಾರದತ್ತ ಕಣ್ಣು ಹಾಯಿಸುತ್ತಾಳೆ.

“ನಿಜ ಹೇಳು! ಅಷ್ಟೊಂದು ಹಣ ನೋಡಿದರೆ ನಿನಗೆ ದುರಾಸೆ ಆಗುವುದಿಲ್ಲವೇನು,” ಎಂದು ಪೊಲೀಸ್ ಅವಳನ್ನು ವ್ಯಂಗ್ಯವಾಗಿ ಕೇಳುತ್ತಾನೆ.

ಸದೆಬಡಿದ ಅವಳ ದೇಹದಿಂದ ರಕ್ತ ಸೋರುತ್ತಿದ್ದರೂ ಸಹ ಅವಳು ತಲೆ ಅಲ್ಲಾಡಿಸುತ್ತಾಳೆ. ರೋಸಿ ಆಯಾಸಗೊಂಡ ಅವಳು ಠಾಣೆಯಿಂದ ಹೊರ ನಡೆಯುತ್ತಾಳೆ. ಅವಳ ಸ್ನೇಹಿತರಾದ ಕಾಂತಮ್ಮ, ಲಕ್ಷ್ಮಿ ಹಾಗು ರಾಧಿಕಾಳ ಮೇಲೆ ಅವರ ಮನೆಯ ಮಾಲೀಕರು ಅವರುಗಳು ಕಳ್ಳತನ ಮಾಡಿರುವುದಾಗಿ ಸುಳ್ಳು ಆಪಾದನೆಯನ್ನು ಮಾಡಿರುವುದು ತಿಳಿದಿತ್ತಾದರೂ ಅವಳಿಗೂ ಹಾಗೆ ಆಗ ಬಹುದೆಂದು ಅವಳ ಕನಸಿನಲ್ಲು ಎಣಿಸಿರಲಿಲ್ಲ.

ವಿಪರ್ಯಾಸವೆಂದರೆ, ಬಾತ್‌ರೂಂಗಳನ್ನು ತೊಳೆದು ಮುಗಿಯುವಷ್ಟರಲ್ಲಿ ಅವಳಿಗೆ ಸಹಿಸಿಕೊಳ್ಳಲಾರದಷ್ಟು ಹಸಿವು. ಗಂಡನು ಮೆನೆಗೆಲಸದಲ್ಲಿ ಅವಳಿಗೆ ನೆರವಾಗಿದ್ದರೆ ಅವಳು ಮಧ್ಯಾಹ್ನಕ್ಕೆಂದು ಅನ್ನದ ಬುತ್ತಿಯನ್ನು ಕಟ್ಟಿಕೊಳ್ಳಲು ಸಮಯ ಸಿಗುತಿತ್ತು.

ಗೃಹ ಕಾರ್ಮಿಕರ ಸಂಘದೆಡೆಗೆ ಅವಳು ಹೆಜ್ಜೆ ಹಾಕುತ್ತಾಳೆ. ಅಲ್ಲಿ ಅವಳಿಗೆ ಸಹಾಯ ಸಿಗುವುದಂತು ಖಚಿತ. ಕ್ಷಣಾರ್ಧದಲ್ಲಿ ರೊಚ್ಚಿಗೆದ್ದ 100 ಕಾರ್ಮಿಕರು ಅವಳ ಮಾಲೀಕರ ಮನೆಯ ಕಡೆ ನಡೆಯುತ್ತಾರೆ. ಈ ಯುದ್ಧವನ್ನು ಗೆದ್ದರು ಸಹ, ಘನತೆ ಗೌರವವೆಲ್ಲವನ್ನು ಅವಳು ಈಗಾಗಲೇ ಕಳೆದುಕೊಂಡಿರುವಳೆಂದು ಅವಳಿಗೆ ಅನಿಸು ತ್ತದೆ. ಮುಖ್ಯವಾಗಿ ಈಗ ಈ ಜಾಗದಲ್ಲಿ ಕೆಲಸ ಸಿಗುವ ಅವಕಾಶಗಳಂತು ಕ್ಷೀಣ.

ಮಾಪ್ ಅನ್ನು ಸೋಪು ನೀರಿನಲ್ಲಿ ಅದ್ದುತ್ತಿರ ಬೇಕಾದರೆಯೇ ಮೇಜಿನ ಮೇಲಿರುವ ಪತ್ರಿಕೆಯು ಅವಳ ಗಮನ ಸೆಳೆಯುತ್ತದೆ. ಕೆಲವು ಅಕ್ಷರಗಳನ್ನು ಗುರುತಿಸುತ್ತಾಳೆ. ಓದು ಬರಹ ಕಲಿಯಲು ಹಾಕ್ಕಿದ್ದ ಶ್ರಮ ವ್ಯರ್ಥವಾಗಿಲ್ಲವೆನಿಸುತ್ತದೆ. ಈಗಷ್ಟೇ 8ನೇ ತರಗತಿಯಲ್ಲಿ ಉತ್ತೀರ್ಣವಾದ ಅವಳ ದೊಡ್ಡ ಮಗಳೇ ಅವಳ ಗುರುಗಳು. ತಾನು ಅವಿಧ್ಯಾವಂತಳಾದರೂ ತನ್ನ ಮಕ್ಕಳು ವಿಧ್ಯಾ ವಂಚಿತರಾಗಬಾರದೆಂಬುದೆ ಅವಳ ದೃಢ ನಿರ್ಧಾರ.

ಕೆಲವು ಕಾರಣಗಳು ಹಲವಾರು ಸಂವಾದಕ್ಕೆ ಅವಕಾಶ ಮಾಡಿಕೊಡುತ್ತದೆ. ಮಾಲೀಕರು ಅವರ ಮಾತುಗಳನ್ನು ಕೇಳಿಸಿಕೊಳ್ಳಲು ತಯಾರಿಲ್ಲದಿದ್ದರು ಕೊನೆಯಲ್ಲಿ ಮಣಿ ಯುತ್ತಾರೆ. ಎಂತಹ ನಿಷ್ಠೂರವಾದ ಪೋಲಿಸು ಸಹ ಸಂಘಕ್ಕಿರುವ ಶಕ್ತಿಯನ್ನು ಎದುರಿ ಸಲಾಗದೆ ತಲೆಬಾಗ ಬೇಕಾಗುತ್ತದೆ.
ಮಹಡಿಯನ್ನು ಶುಚಿ ಮಾಡುವ ಸಲುವಾಗಿ ಅವಳು ಅಲ್ಲಿ ಹೋಗುತ್ತಾಳೆ. ಎಲ್ಲಿ ನೋಡಿದರು ಹಕ್ಕಿಗಳ ಹಿಕ್ಕೆಗಳು. ತಾಳ್ಮೆಯಿಂದ ನಿಧಾನವಾಗಿ ಒಂದೊಂದೆ ಟೈಲಗಳನ್ನು ತೊಳೆಯಲಾರಂಭಿಸುತ್ತಾಳೆ. ಈ ಕೆಲಸವು ಅವಳು ನೆನೆಸಿದಂತೆ ಬೇಗನೆ ಮುಗಿಯು ವಂತಹದಲ್ಲ. ಬಹುಷಃ ಇಂದು ಅವಳು ಟೈಲರಿಂಗ್ ಕ್ಲಾಸ್ಗೆ ಹೋಗಲು ಸಾಧ್ಯವಾಗದು.

“ಸರಿ ದೂರನ್ನು ವಾಪಸ್ಸು ತೆಗದುಕೊಳ್ಳುತ್ತೇವೆ.” “ಓರ್ವ ಸಂಬಂಧಿಕರು ಅದನ್ನು ಕಳುವು ಮಾಡಿರುವುದಾಗಿ ತಿಳಿಯಿತು. ಕ್ಷಮೆ ಯಾಚಿಸು ತ್ತೇವೆ.”

ಒಗೆದಿಟ್ಟಿರುವ ಬಟ್ಟೆಗಳನ್ನು ಇಸ್ತ್ರಿ ಮಾಡುವಳು. ಸುಕ್ಕೆಲ್ಲವನ್ನು ಇಸ್ತ್ರಿ ಮಾಡಿದನಂತರ ನೆಮ್ಮದಿಯ ನಿಟ್ಟುಸಿರು ಬಿಡುವಳು. ಕಿಟಕಿಯ ಬಳಿಬಂದು ಕುಳಿತು ಬೆವರನ್ನು ಒರೆಸಿ ಕೊಳ್ಳುವಳು. ಬೀಸುವ ತಂಪಾದ ಗಾಳಿಯು ಅವಳ ಮುಖವನ್ನು ಸವರುತ್ತದೆ. ಅವಳು ಬಳ್ಳಿಯಲ್ಲಿ ಅರಳಿದ್ದ ತನಗಿಷ್ಟವಾದ ಹಳದಿ ಬಣ್ಣದ ಹೂವನ್ನು ಕೀಳಲು ಕೈ ಹೊರ ಚಾಚುವಳು.

ಸುಮಾರಷ್ಟು ಸಲ ಠಾಣೆ, ವಕೀಲರ ಕಚೇರಿ ಹಾಗು ಸಂಘದ ಆಪೀಸಿಗೆ ಭೇಟಿಯಿತ್ತ ನಂತರ ಅವಳ ಪ್ರಕರಣವನ್ನು ಮುಚ್ಚ ಲಾಯಿತು. ಮನೆಯನ್ನು ಕೆಲಸದ ಜಾಗವೆಂದು ಬಹಳಷ್ಟು ಮಾಲೀಕರು ಇನ್ನು ಸಹ ಪರಿಗಣಿಸುವುದಿಲ್ಲ.

ಹಲವಾರು ಪ್ರಕರಣಗಳಲ್ಲಿ ಕೆಲಸದವರ ಮೇಲೆ ಸುಳ್ಳು ಆಪಾದನೆಗಳನ್ನು ಮಾಡಿರು ತ್ತಾರೆ.

ಮನೆಗೆ ಹಿಂತಿರುಗಿದನಂತರ ಅವಳ ಗಂಡನು ನೆಲದ ಮೇಲೆ ಮಲಗಿರುವುದನ್ನು ನೋಡು ತ್ತಾಳೆ. ತಿಂಗಳಲ್ಲಿ ಎರಡು ವಾರ ಕೆಲಸ ಮಾಡಿ ಉಳಿದ ದಿನಗಳನ್ನು ಮಲಗಿರುತ್ತಲೇ ಕಾಲ ಕಳೆಯುವನು.

ಆದರೆ ಅವನು ಮಲಗಿರುವುದೇ ಒಳಿತು ಯಾಕೆಂದರೆ ಅವನು ಹಾಗೆ ಮಾಡಿದ್ದಲ್ಲಿ ಕಷ್ಟ ಪಟ್ಟು ದುಡಿದಿರುವ ಸಂಪಾದನೆಯನ್ನು ಹೆಂಡ ಕ್ಕೆಂದು ಖರ್ಚು ಮಾಡುವುದಿಲ್ಲ.


ಅವಳು ನಿಧಾನವಾಗಿ ಅಡಿಗೆ ಮನೆಯನ್ನು ಸೇರಿ ಅಡಿಗೆ ಮಾಡಲು ಶುರು ಮಾಡುವಳು.

ಅವಳ ಮಕ್ಕಳು ಶಾಲೆಯಿಂದ ಹಿಂದಿರು ಗುವರು. ಅವರಿಗೆ ಊಟ ಬಡಿಸಿ ಅವರ ಬಳಿ ಕುಳಿತು ಶಾಲೆಯಲ್ಲಿ ಅದದ್ದೆಲ್ಲವನ್ನು ಅವರು ಉದ್ವೇಗದಿಂದ ಹೇಳುತ್ತಿರುವುದನ್ನು ಕೇಳು ತ್ತಿದ್ದರೆ ಕ್ಷಣ ಮಾತ್ರ ಜೀವನವು ತೀರ ಅಸಹನೀಯವಲ್ಲ ಎಂದು ಅನಿಸುವುದು.

# ಮೆಶೀನ್‌ನ ಚೀತ್ಕಾರ

“ಬೇಗ, ಬೇಗ, ಏಕೆ ಇಷ್ಟು ನಿಧಾನವಾಗಿ ಕೆಲಸ ಮಾಡುತ್ತಿದ್ದೀಯ? ಬೇಗ, ಬೇಗ...” ನನ್ನ ಹಿಂದೆ ಎಫ್.ಎಮ್. ರೇಡಿಯೋ ಹಳೇ ಹಿಂದಿ ಹಾಡನ್ನು ಹಾಡುತ್ತಿತ್ತು ... “ಪ್ರೀತಿಯನ್ನು ಪಡೆಯಲು ಎಲ್ಲರಿಗೂ ಅದೃಷ್ಟವಿರುವುದಿಲ್ಲ”...

ನನ್ನ ಮುಂದೆ ಸೂಪರ್‌ವೈಸರ್ ಬಟ್ಟೆಯ ಹೊಲಿಗೆ ಸರಿಯಾಗಿ ಬಂದಿಲ್ಲ ಎಂದು ಇನ್ನೂ ಕೂಗಾಡುತ್ತಿದ್ದ. ನಾನು ಶ್ರೀದೇವಿ ಬಿಳಿ ಸೀರೆಯಲ್ಲಿ ಡಾನ್ಸ್ ಮಾಡುತ್ತಿದ್ದ ಹಗಲು ಗನಸು ಕಾಣುತ್ತಿದ್ದೆ. ನನ್ನ ಮೆದುಳು ಒತ್ತಡದಲ್ಲಿತ್ತು, ಗೊಂದಲದಲ್ಲಿತ್ತು. ನಾನು ಆ ಸೂಪರ್‌ವೈಸರ್ ಕೂಗಾಟ ಕೇಳಿಸಿ ಕೊಳ್ಳಲೋ? ಶ್ರೀದೇವಿಯ ಕನಸು ಕಾಣುವು ದನ್ನು ಮುಂದುವರೆಸಲೋ?



ಫ್ಯಾಕ್ಟರಿಯ ಕಣ್ಣುಕುಕ್ಕುವ ಬಿಳಿಯ ಬೆಳಕಿನಲ್ಲಿ ಎಲ್ಲರೂ ತಲೆ ಬಗ್ಗಿಸಿ ಕೆಲಸ ಮಾಡುತ್ತಿದ್ದರು. ಮೆಶೀನ್ ಸದ್ದು, ಕತ್ತರಿಯ ಸದ್ದು...ಮತ್ತು ಸೂಪರ್‌ವೈಸರ್ ಧ್ವನಿಗಳಿಂದ ಇಡೀ ಹಾಲ್ ಗಲಾಟೆಯಿಂದ ತುಂಬಿ ಹೋಗಿತ್ತು,. ಇದ್ದಕ್ಕಿದ್ದಂತೆ ನನ್ನ ಪಕ್ಕದಟೇಬಲ್‌ನಲ್ಲಿ ನನ್ನತಂದೆತಾಯಿ ಕೆಲಸ ಮಾಡುತ್ತಿದ್ದುದು ನನ್ನ ಕಣ್ಣಿಗೆ ಬಿತ್ತು. ಅವಳ ತಲೆಯು ಇನ್ನೂ ಬಗ್ಗಿ ಹೋಗಿತ್ತು. ಅರೆ, ಇಲ್ಲಿ ಇವರೇನು ಮಾಡುತ್ತಿದ್ದಾರೆ? ನನಗೆ ಆಶ್ಚರ್ಯವಾಯಿತು. ಅವರು ಇಲ್ಲಿ ಬಂದರೆ ಮನೆಯಲ್ಲಿ ನನ್ನ ತಮ್ಮ ತಂಗಿಯರನ್ನು ನೋಡಿ ಕೊಳ್ಳು ವವರು ಯಾರು? ನನ್ನಕಣ್ಣು ಭಾರ ವಾಯಿತು. ಸುತ್ತಮುತ್ತಲಿನದ್ದೆಲ್ಲ ಮಂಜು ಮಂಜಾ ಯಿತು.

ಇದ್ದಕಿದಂತೆ ಒಬ್ಬ ವ್ಯಕ್ತಿ ಕಾಣಿಸಿಕೊಂಡ.

ಈ ಮೊದಲು ನಾನು ಅವನನ್ನು ನೋಡೇ ಇರಲಿಲ್ಲ. ಅವನು ನನ್ನ ಪಕ್ಕದಲ್ಲಿ ಕುಳಿತು ಕೊಳ್ಳಲು ಪ್ರಯತ್ನಿಸಿದ. ನಾನು ಜೋರಾಗಿ ಕಿರುಚಿಕೊಳ್ಳಲು ಪ್ರಾರಂಭಿಸಿದೆ. ಪೊಲೀಸರನ್ನು ಕರೆಯಿರಿ ಎಂದು ನನ್ನ ಮಾಸ್ಟರ್‌ಗೆ ಹೇಳಿದೆ. ಆದರೆ ಬದಲಿಗೆ ಸೂಪರ್‌ವೈಸರ್ ನನ್ನ ಬಳಿಗೆ ಬಂದು ನನ್ನ ಕೈಗಳನ್ನು ಕಟ್ಟಿಹಾಕಿದ. ನನ್ನನ್ನು ಫ್ಯಾಕ್ಟರಿಯ ಒಂದು ಮೂಲೆಗೆ ಕರೆದೊ ಯ್ಯಲಾಯಿತು, ಆ ಕೋಣೆ ಕತ್ತಲಾಗಿತ್ತು. ಆ ಕೋಣೆಯಲ್ಲಿ ಚೀತ್ಕಾರದ ಸದ್ದು ಮೊರೆ ಯುತ್ತಿತ್ತು. ಮೆಶೀನ್ ಚೀತ್ಕರಿಸಿದ ಹಾಗೆ. ನನ್ನ ಕಣ್ಣು ಆ ಕತ್ತಲಿಗೆ ಹೊಂದಿಕೊಂಡಾಗ, ನಾನು ಕಂಡದ್ದು ಆ ಕೋಣೆಯ ಒಳಗಿದ್ದ, ನನ್ನ ಹಾಗೇ ಬಲಿಪಶುವಾದ ಎಷ್ಟೋ ನನ್ನ ಹಳ್ಳಿಯ ಹುಡುಗಿಯರು.

ಸ್ವಲ್ಪ ದೂರದಲ್ಲಿಂದ ತಪ್ಪಿಸಿಕೊಳ್ಳಲು ಕಿರಿದಾದ ಹಾದಿ ಕಾಣಸಿತು. ಮಂಪರಿನಲ್ಲಿದ್ದ ನಾನು ಆ ದಾರಿಯೆಡೆಗೆ ತಪ್ಪು ಹೆಜ್ಜೆ ಹಾಕುತ್ತ ಹೊರಟೆ. ನಾನು ಈ ಚೀತ್ಕಾರದ ಬಗ್ಗೆ, ಈ ಸೂಪರ್ ವೈಸರ್‌ಗಳ ಬಗ್ಗೆ, ಈ ಕಾರ್ಖಾನೆಯ ನಿಜವನ್ನು ಜಗತ್ತಿಗೆ ತಿಳಿಸಬೇಕಿತ್ತು. ಆ ಕೋಣೆಯಲ್ಲಿದ್ದ ಪ್ರತಿ ಹುಡುಗಿಯೂ ಸಹ ಸ್ವತಂತ್ರವಾಗುವುದನ್ನು ಖಾತ್ರಿ ಪಡಿಸಿಕೊಳ್ಳ ಬೇಕಿತ್ತು. ನನ್ನ ಮೈಯೆಲ್ಲ ಭಾರವಾಗಿತ್ತು, ಆದರೂ ನಾನು ನಡೆಯುವುದನ್ನು ಮುಂದು ವರೆಸಿದೆ.



ನನಗೆ ಎಚ್ಚರವಾದಾಗ, ನಾನು ಏದುಸಿರು ಬಿಡುತ್ತಿದ್ದೆ.

ಮಾರನೇ ದಿನ ನಾನು ಕಾರ್ಖಾನೆಗೆ ಹೋದಾಗ ಎಲ್ಲವೂ ನನಗೆ ಅಪರಿಚಿತವೆನಿಸಿತು. ನನ್ನ ಕನಸು ನನ್ನ ನೆನಪಿನಲ್ಲಿ ಇನ್ನೂ ಹಚ್ಚ ಹಸುರಾಗಿತ್ತು. ನಾನು ತಲೆ ತಗ್ಗಿಸಿ ಕೆಲಸ ಮಾಡಲು ಶುರುಮಾಡಿದೆ, ನನ್ನ ಕಿವಿಯಲ್ಲಿ ಶ್ರೀದೇವಿ ಹಾಗೂ ಸೂಪರ್‌ವೈಸರ್‌ನ ಬೈಗಳು ತುಂಬಿಕೊಂಡವು. "ಏಯ್ ಮೂದೇವಿ... ಬೇಗ ಬೇಗ ಮಾಡು, ಟಾರ್ಗೆಟ್ ಮುಗಿಸಬೇಕು."

ಮೊದಲನೇ ದಿನ ಕಾರ್ಖಾನೆಯಲ್ಲಿ ಹೆಚ್ಚು ಕಡಿಮೆ ಕನಸಿಲ್ಲಿದ್ದ ಹಾಗೆ ಚೆನ್ನಾಗಿರುತ್ತದೆ. ನಿನ್ನ ಮೇಲೆ ಯಾರೂ ಕೂಗಾಡುವುದಿಲ್ಲ. ಆದರೆ ಸಮಯ ಹೋದಂತೆಲ್ಲ, ಆ ಕನಸು ದು:ಸ್ವಪ್ನವಾಗತೊಡಗುತ್ತದೆ. ಮೇಶೀನ್‌ನ ಸದ್ದು, ನಿನ್ನ ಯೋಚನೆಗಳಿಗಿಂತ ಜೋರಾಗಿರುತ್ತದೆ. ಮೆಶೀನ್‌ನ ಸದ್ದು ನಿನ್ನ ಚೀತ್ಕಾರಕ್ಕಿಂತ ಜೋರಾಗಿರುತ್ತದೆ. ನಿನ್ನ ಚೀತ್ಕಾರ ನಿನ್ನೊಳಗೇ ಅಡಗಿ ಹೋಗುವಹಾಗೆ, ನಿನ್ನ ಚೀತ್ಕಾರ ನಿನಗಲ್ಲದೆ ಬೇರೆ ಯಾರಿಗೂ ಕೇಳಿಸದ ಹಾಗೆ.

### ನಿಗದಿತ ದಿನದಂದು ನಮ್ಮ ಸಂಬಳ ನಮ್ಮ ಕೈಸೇರಬೇಕು

ಪೌರಕಾರ್ಮಿಕರ ಹೋರಾಟ: 29 ಮೇ 2019

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆವರಣದಲ್ಲಿ ಸೇರಿದ ಪೌರಕಾರ್ಮಿಕರ ಬೇಡಿಕೆಗಳು:

- ನಿಗದಿಪಡಿಸಿದ ದಿನದಂದು ಪೂರ್ಣಸಂಬಳವನ್ನು ಯಾವ ತಡೆಯೂ ಇಲ್ಲದೆ ನೀಡತಕ್ಕದ್ದು.
- ಪಿ.ಡಿ.ಕಾರ್ಡ್, ESI ಹಾಗು PFಗಳ ಸೌಲಭ್ಯ ಸಿಗಬೇಕು.
- ಮುಖಮುಸುಕು, ಬೂಟು ಹಾಗು ಕೈ ಗ್ಲೌಸ್‌ಗಳಂತಹ ರಕ್ಷಣಾ ದಿರಿಸುಗಳನ್ನು ಒದಗಿಸಬೇಕು.
- ಶೌಚಾಲಯಗಳನ್ನು ನಿರ್ಮಿಸಿಕೊಡಬೇಕು.
- ಕಾರ್ಮಿಕರ ಕಾಲೋನಿಗಳಿಗೆ ಆರೋಗ್ಯಕರ ಆಹಾರವನ್ನು ಪೂರೈಸಬೇಕು.
- ಕಾರ್ಮಿಕರಿಗೆ ವಾಹನ ಸೌಕರ್ಯ ಹಾಗು ಕಸ ಸಾಗಿಸಲು ಸೂಕ್ತ ವಾಹನಗಳನ್ನು ಒದಗಿಸಬೇಕು.
- ಪ್ರತಿ ತಿಂಗಳು ಎಲ್ಲಾ ಕಾರ್ಮಿಕರಿಗೂ ನಾಲ್ಕು ದಿನದ ಗೈರು ಹಾಜರಿ ತೋರಿ ಸಂಬಳಕ್ಕೆ ಕತ್ತರಿ ಹಾಕುವ ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯಲ್ಲಿ ಸುಧಾರಣೆ ತರಬೇಕು.
- ಪಿಂಚಣಿ ಯೋಜನೆಗಳು ರೂಪುಗೊಳ್ಳಬೇಕು.

ಇವರಿಗೆ ಬೆಂಬಲವಾಗಿ ನಿಂತವರು: ALF (ಆಲ್ಟರ್ನೇಟಿವ್ ಲಾ ಫೋರಮ್) ಮತ್ತು CPI (ML)

## ಒಂದು, ಎರಡು, ಮೂರು ....... ಹತ್ತು..... ಒಂದು, ಎರಡು......

ವಾರ್ಡ್ 58 ನ್ಯೂ ತಿಪ್ಪಸಂದ್ರ ದ ಹೆಮ್ಮೆ ಪಡಬೇಕಾದಂತಹ ಪೌರಕಾರ್ಮಿಕಳಾದ ಮೀನಾ ಅವರನ್ನು ಭೇಟಿ ಮಾಡಿ. ಬಾಗಿದ ತಲೆ ಎತ್ತಿ ನೇರ ನಿಂತು ಅವಳ ಕೈಯಲ್ಲಿದ್ದ ಕಸಪೊರಕೆಯನ್ನು ನೆಲಕ್ಕೆ ಮೆಲ್ಲನೆ ಜಾರಿ ಬಿಡುವಳು. ಮುಖವನ್ನು ಪಕ್ಕಕ್ಕೆ ತಿರುಗಿಸಿ ಅವಳ ಕೆನ್ನೆಯನ್ನು ಹಾಕಿಕೊಂಡಿದ್ದ ಬಿ.ಬಿ. ಎಂ.ಪಿಯ ಹಸಿರು ಜಾಕೆಟ್ ನಿಂದ ಒರಸಿಕೊಳ್ಳುತ್ತಾಳೆ. ಮೀನ ಗಡಿಯಾರದ ಕಡೆ ಕಣ್ಣು ಹಾಯಿಸುತ್ತಾಳೆ.

ಒಂದು: ಈಗಾಗಲೇ ಒಂದು ವಾರವಾಯಿತು. ವರ್ಷದ ಹಿಂದೆ ಮನೆ ಬಿಟ್ಟು ಹೋಗಿದ್ದ ಗಂಡ ಮರಳಿ ಒಂದು ವಾರವಾಯಿತು.

ಎರಡು: ಪೌರಕಾರ್ಮಿಕರ ಕಾರ್ಯ ಪಡೆಯನ್ನು ಇಬ್ಬರ ಜೋಡಿಗಳಂತೆ ರಚಿಸಲಾಗಿದೆ. ನಗರವನ್ನು ಸ್ವಚ್ಛ ಮಾಡಲು ಮಹಿಳೆಯರು ಈ ಜೊತೆಯಾಗಿ ಕೆಲಸ ಮಾಡುತ್ತಾರೆ.

ಮೂರು: ಮುಂಜಾನೆ 3.00 ಘಂಟೆಯಿಂದ ಅವಳ ದಿನವು ಮನೆಕೆಲಸದಿಂದ ಪ್ರಾರಂಭವಾಗುತ್ತದೆ .

ನಾಲ್ಕು: ಸಂಜೆ 4.00 ಘಂಟೆಗೆ ಮನೆ ಸೇರುತ್ತಾಳೆ. ಆದರೂ ಅವಳ ಕೆಲಸ ಇನ್ನು ಮುಗಿದಿರುವುದಿಲ್ಲ

ಐದು: ಐದು ಹಸಿದ ಹೊಟ್ಟೆಗಳಿಗೆ ಅವಳು ಊಟ ನೀಡ ಬೇಕು, ಅವಳ ಶಾಲೆಯಿಂದ ಬರುವ ನಾಲ್ಕು ಮಕ್ಕಳು ಹಾಗು ಅವಳ ಗಂಡ ಸೇರಿದಂತೆ.

ಆರು: ದಿನಕ್ಕೆ ಮೂರ ಸಲದ ಹಾಗೆ ಬಿಬಿಎಂಪಿಯ ಪೌರಕಾರ್ಮಿಕರು ಅವರು ಹಾಜಾರಾಗಿರುವರೆಂದು ದಾಖಲಾಯಿಸ ಬೇಕು. ಇಲ್ಲವಾದ್ದಲ್ಲಿ ಅವರಿಗೆ ಕೊಡಬೇಕಾದ ವೇತನದಿಂದ ಕಡಿತಗೊಳಿಸಲಾಗುತ್ತದೆ. ಮೀನ ಹಾಗು ಅವಳ ಗೆಳತಿಯರು ಅವರು ಹಾಜಾರಾಗಿರುವರೆಂದು ದಾಖಲಿಸಲು ಒಂದು ಸಲಕ್ಕೆ 1 ಕಿ.ಮಿ ನಡೆಯ ಬೇಕಾಗಿಬರುತ್ತದೆ. ಅವಳ ಪೂರ್ತಿ ವೇತನವನ್ನು ಪಡೆಯಲು ಅವಳು ದಿನ ನಿತ್ಯ 6 ಕಿ.ಮಿ ನಡೆಯುತ್ತಾಳೆ.

ಏಳು: ಬೆಳಗ್ಗಿನಿಂದ ಕಸವನ್ನು ಬೇರ್ಪಡಿಸದೆಯಿರುವ ಮನೆ ಇದು ಏಳನೆಯದು ಮಲಿನವಾದ ಡಯಾಪರ್, ಪ್ಯಾಡಗಳು, ಕೊಳೆತ ತರಕಾರಿಗಳು, ಬಾಡು, ಪ್ಲಾಸ್ಟಿಕ್... ಮೀನ ಅದನ್ನು ಸ್ವಚ್ಛಗೊಳಿಸುವಳು ಆದರೆ ಅಲ್ಲಿಂದ ಹೋಗುವ ಮುನ್ನ ನಿವಾಸಿಗಳಿಗೆ ಎಚ್ಚರಿಕೆ ನೀಡಿಯೇ ಹೋಗುವಳು. ನೀವು ಬೇರ್ಪಡಿಸದೆಯಿದ್ದರೆ ಮೀನ ಕಸ ತೆಗೆಯುವುದಿಲ್ಲವೆಂದು.

ಎಂಟು: ಅವಳ ಸ್ನೇಹಿತ ಬಿಬಿಎಂಪಿ ಯ ಕಸ ಸಂಗ್ರಾಹಕ ಜಾವೇದ್ ಗೆ ವೇತನ ಸಿಕ್ಕಿ ಈಗಾಗಲೇ ಎಂಟು ತಿಂಗಳಾಗಿದೆ. ಆದರೂ ಸಹ ತಪ್ಪದೆ ದಿನ ಕೆಲಸಕ್ಕೆ ಬರುವನು. ಅವನ ಮನೆಯ ಮಾಲೀಕನಿಗೆ ವೇತನವು ಬಂದ ಕೂಡಲೆ ಬಾಡಿಗೆಯ ಹಣವನ್ನು ಕೊಡುವುದಾಗಿ ಭರವಸೆ ನೀಡಿರುವನು.

ಒಂಬತ್ತು: ಅವಳ ಕುಟುಂಬದಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರು – ಅವಳ ತಾಯಿ, ತಂದೆ, ಚಿಕ್ಕಮ್ಮಂದಿರು, ಚಿಕ್ಕಪ್ಪಂದಿರು, ದೊಡ್ಡಮ್ಮಂದಿರು, ದೊಡ್ಡಪ್ಪಂದಿರು, ಸೋದರ ಸಂಬಂಧಿಯರು, ಮಗಳು, ಒಂದು ಕಾಲದಲ್ಲಿ ಅವಳ ಅಜ್ಜನೂ ಸಹ.

ಹತ್ತು: 10 ವರ್ಷದಿಂದ ಅವಳಿಗೆ ಶ್ರೀಮತಿ ರಂಜನ್ ರವರ ಪರಿಚಯವಿದೆ. ಅಕ್ಕನಂತೆ ಸ್ಪಂದಿಸುವ ಅವಳು ಮೀನಮ್ಮಳಿಗೆ ಬಿಸ್ಕತ್ ಹಾಗು ಕುಡಿಯಲು ನೀರು ತಂದು ಕೊಡುವಳು. ಹಾಗೆಯೇ ವಾಪಸ್ಸು ಮನೆಯೊಳಗೆ ಹೋಗುವ ಮುನ್ನ ಅವಳೊಡನೆ ಕೆಲವು ನಿಮಿಷ ಹರಟೆ ಹೊಡೆದು ಹೋಗುವಳು.

ಅಂಕಿಗಳ ಲೆಕ್ಕ ಮತ್ತೆ ಶುರು ಆಗುವುದು.



# ಪ್ರವೇಶ ನಿಷೇಧಿಸಲಾಗಿದೆ

ಬಂಧಿಸಿದ ಕೈಗಳು. ಸಿಗರೇಟ್‌ನ ಹೊಗೆ. ಕಾಮ ಕೇಳಿಗಳ ಘಾಟು ವಾಸನೆ. ಗಾಯಗಳು. ಒಂದೇ ಸಮನೆ ಅರಚುತ್ತಿರುವ ಸೈರನ್ ಶಬ್ದ ಲಾಡ್ಜನ ಮುಂದೆ ನಿಲ್ಲುತ್ತದೆ.

ಅವಳು ಗಿರಾಕಿಗೆ ಕಾಯುತ್ತಿರುವಳು. ಈ ರಾತ್ರಿ ಹೇಗಿರುವುದೊ ಅವಳಿಗೆ ತಿಳಿಯದು. ಅವನು ಅವಳ ಮೇಲೆ ದಾಳಿ ಮಾಡುವನೊ ಇಲ್ಲಾ ಶಾಂತವಾಗಿರುವನೊ ಇಲ್ಲಾ ಒತ್ತಾಯ ಮಾಡುವವನೊ ಅವಳಿಗೆ ತಿಳಿಯದು. ಅಪಾಯ ಅವಳ ಕೆಲಸಕ್ಕೆ ಇದ್ದದ್ದೆ.

ಅವನು ಅವಳನ್ನು ಪಿಕ್ ಅಪ್ ಮಾಡುತ್ತಾನೆ. ಲಾಡ್ಜನ ಒಳಗಡೆಯ ವಾತವರಣ: ಮಬ್ಬು ಬೆಳಕು. ಕತ್ತಲೆಯ ಆವರಣ. ಲಕ್ಷೀ ದೇವಿಯ ಪಟದ ಸುತ್ತಾ ತಿರುಗುತ್ತಿರುವ ಎಲ್.ಇ.ಡಿ ದೀಪ. ಮಾತುಗಳಿಲ್ಲ ಬರೀ ಮೌನ. ಸನ್ನೆಗಳಷ್ಟೆ. ಬೆಲೆ ಮುಂಚಿತವಾಗಿಯೇ ನಿಗದಿಯಾಗಿಯಿರುವುದು.ರಿಸ್ಪೆಷನ್ನಲ್ಲಿರುವ ಲಾಡ್ಜ ನ ಮಾಲೀಕನಿಗೆ ಗಿರಾಕಿಯು ದುಡ್ಡು ನೀಡುತ್ತಾನೆ. ಅವಳು ಎಲ್ಲವನ್ನು ಮೌನವಾಗಿ ವೀಕ್ಷಿಸುತ್ತಾಳೆ.

ಒಂದು ಪ್ಯಾಕ್ ಕಾಂಡೋಮ್‌ನನ್ನು ರೂ.500ಕ್ಕೆ ಖರೀದಿಸುತ್ತಾನೆ. ಮೌನವಾಗಿ ವೀಕ್ಷಿಸುತ್ತಾಳೆ. ಗಂಡಸರಿಬ್ಬರೂ ಒಬ್ಬರನೊಬ್ಬರು ನೋಡಿ ಕಿರುನಗುತ್ತಾರೆ. ಅವಳು ಮೌನವಾಗಿ ವೀಕ್ಷಿಸುತ್ತಾಳೆ.

ಸಮಯ 2.30 ಮಧ್ಯಾಹ್ನ. ಕಾರ್ಮೋಡ ಕವಿದ ಆಕಾಶ.

ರೂಂನಂ 203. ಕಲೆಯಾಗಿರುವ ಬೆಡ್‌ಶೀಟ್‌ಗಳು. ಬಳಸಿರುವ ಹೊದಿಕೆ. ನಕಲಿ ವೆಲ್ವೆಟ್ ಪರದೆಗಳು. ಎಲ್ಲವೂ ಕೆಂಪು. ಸೇದಿ ಬಿಸಾಡಿರುವ ಸಿಗರೇಟ್ ತುಂಡುಗಳನ್ನು ಹೊರಚಲ್ಲುತ್ತಿರುವ ಆಶ್ ಟ್ರೇಗಳು. ಎಲ್ಲವು ಸಜ್ಜಾಗಿದೆ. ಅವಳು ಸಿಗರೇಟ್ ಸೇದುವುದಿಲ್ಲ. ಸಿಗರೇಟ್ ಪ್ಯಾಕ್ ಒಂದನ್ನು ಅವಳ ಮೇಲೆಸೆಯುತ್ತಾನೆ. ಒಂದು ದಂ ಎಳೆಯುತ್ತಾಳೆ. ಕೆಮ್ಮುತ್ತಾಳೆ. ಕಣ್ಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ರಾಯಲ್‌ಚಾಲೆಂಜ್ ಬಾಟಲಿಯ ಮುಚ್ಚುಳವನ್ನು ತೆಗೆಯುತ್ತಾನೆ. ಅದರಿಂದ 90 ಎಂಎಲ್ ಬಗ್ಗಿಸಿ ನೀರು ಬೆರೆಸದೆ ಕುಡಿಯಲು ನೀಡುತ್ತಾನೆ. ಅವನ ಗ್ಲಾಸಿಗೆ ನೀರು ಬೆರಸಿಕೊಳ್ಳುತ್ತಾನೆ. ಅವಳಿಗೆ ವಿಸ್ಕಿ ಕಂಡರಾಗದು. ಅವಳಿಗಿಷ್ಟವಿರುವುದು ರಂ. ಆದರೆ ಅವಳು ಕುಡಿಯಲೇ ಬೇಕು. ಸ್ವಲ್ಪವಷ್ಟೇ ಹೀರುತ್ತಾಳೆ. ಕೆಮ್ಮುತ್ತಾಳೆ. ಬಲೂನ್ ನಂತೆ ಕಾಂಡೋಮ್ ನಲ್ಲಿ ಗಾಳಿ ತುಂಬಿ ಅವನು ರೂಂನಲ್ಲಿ ತೇಲಲು ಬಿಡುತ್ತಾನೆ.


ಅದು ಫ್ಯಾನ ಗಾಳಿಗೆ ಹಿಂದು ಮುಂದು ತೂಗಾಡುತ್ತಾ ಅವಳನ್ನು ಹಾದು ಹೋಗಿ ಮೂಲೆ ಸೇರುತ್ತದೆ. ಕಾಂಡೋಮ್ ಬಳಸದೆ ಅವಳನ್ನು ಸಂಭೋಗಕ್ಕೆ ಬಲಾತ್ಕರಿಸುತ್ತಾನೆ. ಸದ್ದಿಲ್ಲದೆ ಬಿಕ್ಕಳಿಸುತ್ತಾಳೆ. ವಿಕೃತ ಕಾಮ ಕೇಳಿಗೆ ಒಳಪಡಿಸುತ್ತಾನೆ.

ಮುಖ ತೊಳೆದುಕೊಳ್ಳಲೆಂದು ಬಾತ್‌ರೂಂಗೆ ಹೋಗುತ್ತಾಳೆ. ಕನ್ನಡಿಯಲ್ಲಿ ಅವಳ ಪ್ರತಿಬಿಂಬವನ್ನು ನೋಡುತ್ತಾಳೆ. ಪ್ರತಿಬಿಂಬದಲ್ಲಿ ಕಂಡವಳು ತಾನೆ ಎನೊ ಎಂಬ ಸಂಶಯಕ್ಕೊಳಗಾಗುತ್ತಾಳೆ. ಮತ್ತೆ ಮತ್ತೆ ಮುಖಕ್ಕೆ ನೀರನ್ನು ಎರಚಿಕೊಳ್ಳುತ್ತಾಳೆ. ಅವನು ಜೊಲ್ಲು ಸುರಿಸಿಕೊಂಡು ನಿಶಕ್ತನಾಗಿ ಮಂಚದ ಮೇಲೆ ಅಂಗಾತನಾಗಿ ಬಿದ್ದಿರುವನು. ಎದ್ದು ಸಮವಸ್ತ್ರವನ್ನು ಧರಿಸಿಕೊಂಡು ಬಾಗಿಲನ್ನು ಎಳೆದುಕೊಂಡು ಹೊರ ಹೋಗುತ್ತಾನೆ.

ಕೆಂಪು ಪರದೆಯನ್ನೇ ದಿಟ್ಟಿಸುತ್ತಾಳೆ. ತುಂಬ ದಣ ವಾಗಿದೆ ಎಂದು ಅನಿಸುತ್ತದೆ. ಈಗ ಸಾಯಂಕಾಲ 5.00 ಘಂಟೆಯ ಸಮಯ. ಅವಳು ಸೆಲ್ವಾರಕಮೀಜ್ ಧರಿಸಿ ದುಪ್ಪಟ್ಟವನ್ನು ಹಾಕಿಕೊಳ್ಳುವಳು. ಕಣ್ಣಿಗೆ ಕಾಡಿಗೆ ಹಚ್ಚಿ, ತುಟಿಗೆ ಬಣ್ಣವನ್ನು ಲೇಪಿಸಿ ಕೂದಲನ್ನು ಎತ್ತಿ ಗಂಟು ಹಾಕಿಕೊಳ್ಳುವಳು.

ಪೊಲೀಸಿನ ಗಾಡಿಯು ಬಲಕ್ಕೆ ತಿರುಗುತ್ತದೆ. ಅವನೊಬ್ಬ ಸ್ಥಳೀಯ ಎಮ್.ಎಲ್.ಎ., ಸರ್ಕಲ್ ಇನ್ಸಪೆಕ್ಟರ್. ಸ್ಟಾಕರ್. ತಲೆಹಿಡುಕ. ಕಾಲ್ ಸೆಂಟರ್ನ ಉದ್ಯೋಗಿ. ಬೀದಿ ವ್ಯಾಪಾರಿ. ವ್ಯಾಪಾರಿ, ವೆಲ್ಡರ್. ವಿವಾಹಿತ. ವಯಸ್ಕ ಹುಡುಗ.

ಅವನು ನಿಧಾನವಾಗಿ ಅವಳನ್ನು ಸಮೀಪಿಸುತ್ತಿರುವುದನ್ನು ಗಮನಿಸುತ್ತಾ ನಿಲ್ಲುವಳು.



## ಶ್ರದ್ಧಾಂಜಲಿ

ಯಾವ ಪತ್ರಿಕಾ ವರದಿಯಲ್ಲೂ ಕಾಣಿಸಿಕೊಳ್ಳದ ಪ್ರೌಢ ಸುಂದರಿಯರಾದ ಶಾಲು, ರೇವತಿ, ಮಹಾದೇವಿ ಹಾಗು ಇತರರಿಗೆ ಈ ಶ್ರದ್ಧಾಂಜಲಿ. ನಿಮ್ಮ ಎಲ್ಲರ ಹೆಸರುಗಳನ್ನು ನಾವು ಅರಿಯೆವು, ಆದರೆ ಸಾವನ್ನಪ್ಪಿದ ನಿಮ್ಮ ಚೇತನಗಳನ್ನು ನೆನೆದು ದುಃಖಿಸುತ್ತೇವೆ. ಈ ಸಾಮೂಹಿಕ ಶೋಕಾಚರಣೆಯು ಮಂಗಲಮುಖಿಯರ ಈ ಸಮಾಜದೊಂದಿಗಿನ ಅನುಭವಗಳಿಗೆ ಮೀಸಲಾಗಿದೆ.

ಆ ನಿಮ್ಮ ನಗುವಿಗೆ, ಕೇಡುಗಳನ್ನು ಧಿಕ್ಕರಿಸುವ ನಿಮ್ಮ ಎದೆಗಾರಿಕೆಗೆ, ನಿಮ್ಮ ಸ್ಥಿತಪ್ರಜ್ಞೆತೆಗೆ ಈ ಶ್ರದ್ಧಾಂಜಲಿ. ಬದುಕಿನಲ್ಲೂ, ಸಾವಿನಲ್ಲೂ ತಿರಸ್ಕೃತವಾಗಿರುವ ನಿಮ್ಮನ್ನು ಆ ಪ್ರೀತಿಯಿಂದ ನೆನೆಯುತ್ತೇವೆ: ಸಂತೆ ಬೀದಿಗಳಲ್ಲಿ ಹೊಡೆಸಿಕೊಂಡು, ಬೀದಿ ಹೆಣವಾದ, ಓಡುವ ರೈಲಿನ ಗಾಲಿಗೆ ಎಸೆದು ಶವವಾಗಿ ರುವ, ದೇವಾಲಯದಲ್ಲಿ ಕೊಲೆಯಾದ, ನಿಮ್ಮನ್ನು ಸ್ಮರಿಸುತ್ತ ಈ ಶ್ರದ್ಧಾಂಜಲಿ ನಿಮಗೆ ಅರ್ಪಿಸುತ್ತೇವೆ.

ಕುಟುಂಬದ ಸಹಕಾರವಿಲ್ಲದೆ, ಜಾತಿ ಹೆಸರಲ್ಲಿ ಜೀವ ಕಳೆದುಕೊಂಡ, ವಿದ್ಯಾಭ್ಯಾಸ, ನೆಲೆ, ನೌಕರಿ, ಸಾಮಾಜಿಕ ಸೌಲಭ್ಯ, ಕನಿಷ್ಠ ಮಾನುಷ್ಯ ಗೌರವ ಇವ್ಯಾವುದನ್ನೂ ಕಾಣದೆಯೇ ಲೋಕ ತೊರೆದ ನಿಮ್ಮ ಜೀವಗಳಿಗೆ ಶ್ರದ್ಧಾಂಜಲಿ.

ಈ ಶ್ರದ್ಧಾಂಜಲಿಯು ಪ್ರೀತಿ ಹಾಗು ಪ್ರೇಮದ ಮಿತಿಗಳನ್ನು ಮೀರಿ, ನಿಮ್ಮದೇ ಆದ ಧ್ವನಿ ಹಾಗು ಹಾಸ್ಯ ನಮ್ಮ ಮನ ಮುಟ್ಟಿದೆ. ನಿಮ್ಮೆಲ್ಲರ ಆತ್ಮಗಳು ಎಲ್ಲೇ ಇದ್ದರು, ಅವು ನಮ್ಮನ್ನು ಸದಾ ಕಾಡುತ್ತಿರುತ್ತವೆ.

**ಸ್ವತಂತ್ರ ಬೇಗಂ – ಕಳೆದು ಹೋದ ತಾಣಗಳ ಕತೆಗಳು**
ಕಳೆದುಹೋದ ತಾಣಗಳಲ್ಲಿ ಚಿಗುರುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರ ಕುರಿತಾದ ಬಹುಭಾಷಿಕ ನಾಟಕ
30 ಜುಲೈ 2019 | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು | ಸಂಜೆ 6:30ಕ್ಕೆ

ಬೇಗಂ ಅದಮ್ಯ ಚೇತನದ ಹೆಣ್ಣಾಗಿದ್ದರು. ಆಕೆಯ ಮಹಲಿಗೆ ಕಾವಲು ತಡೆಯೂ ಇದ್ದಿರಲಿಲ್ಲ. ಅಲ್ಲಿ ಎಲ್ಲರಿಗೂ ಮುಕ್ತ ಪ್ರವೇಶ. ಪರಸ್ಪರ ಅವಲಂಬನೆಯ, ಸಾಂತ್ವನದ ನೆಲೆ ನೀಡುವ ತಾಣ ಅದಾಗಿತ್ತೆಂದು ಆಟೋ ಚಾಲಕರು, ಬೀದಿ ವ್ಯಾಪಾರಿಗಳು, ಕಬಾಡಿ ಅಂಗಡಿಯವರು, ಮಂಗಳ ಮುಖಿಯರು, ಇವರೆಲ್ಲರ ನೆನಪಲ್ಲಿ ಇನ್ನೂ ಹಸಿರಾಗಿದ್ದಾರೆ. ಆಸಕ್ತಿಯಿಂದ, ಜಾಗರೂಕತೆಯಿಂದ ಹುಡುಕಿದಲ್ಲಿ ಆಕೆಯ ಬಿಂಬ ಈ ನಗರದ ಗಾಜು ಪರದೆಗಳಲ್ಲಿ ಕ್ಷೀಣವಾಗಿ ಕಾಣಬಹುದು.